ಳ) ರಾಯಚೂರು ರೈತರ ವ್ಯವಸಾಯೋತ್ಪನ್ನ ಸಹಕಾರಿ ಮಾರಾಟ ಸಂಘದಿಂದ ಎಣ್ಣೆ ಘಟಕವನ್ನು ಮಹಾ ಮಂಡಳವು ೧೯೬೯–೭೦ನೇ ಸಾಲಿನಲ್ಲಿ ವಹಿಸಿಕೊಂಡಿರುವ ವನಸ್ಪತಿ ಪಶು ಆಹಾರ ಇತ್ಯಾದಿಗಳನ್ನು ಉತ್ಪಾದಿಸಿತ್ತಿದ್ದು, ಕ್ರಮೇಣ ಅನೇಕ ತಾಂತ್ರಿಕ ತೊಡಕುಗಳಿಂದ ಈ ಘಟಕದ ಕೆಲಸಗಳೂ ಸಮರ್ಪಕವಾಗಿ ನಡೆಯದೇ ೧೯೬೯–೭೦ ರಿಂದ ೧೯೭೫–೭೬ರ ವರೆವಿಗೂ ಒಟ್ಟು ೧೨೬.೨೭ ಲಕ್ಷ ರೂ.ಗಳಷ್ಟು ನಷ್ಟ ಅನುಭವಿಸಿರುತ್ತದೆ.

೫) ೧) ರಾಜ್ಯದಲ್ಲಿರುವ ಎಲ್ಲಾ ಸಹಕಾರಿ ಹತ್ತಿ ನೂಲಿನ ಗಿರಣಿಗಳಿಗೆ ಅವಶ್ಯಕವಾದ ಸಂಪೂರ್ಣ ೧,೮೦೦ ಲಕ್ಷ ರೂ.ಗಳ ಹತ್ತಿಯನ್ನು ಕವಿಂಷನ್ ಆಧಾರದ ಮೇಲೆ ಖರೀದಿಸಿ ಹತ್ತಿ ಗಿರಣಿಗಳಿಗೆ ಸರಬರಾಜು ಮಾಡುತ್ತಿರುವುದರಿಂದ, ಮಹಾ ಮಂಡಳವು ಲಾಭಗಳಿಸುವ ಸಾಧ್ಯತೆಯಿರುತ್ತದೆ.

೨) ವ್ಯವಸಾಯೋತ್ಪನ್ನಗಳ ವ್ಯವಹಾರದಲ್ಲಿ ಅವಶ್ಯಕತೆ ಇದ್ದ ಉತ್ಪನ್ನಗಳನ್ನು ಮಾತ್ರ ಖರೀದಿ ಮಾಡಿ ಮಾರುಕಟ್ಟೆ ಸ್ಥಿರತೆಯನ್ನು ಅನುಸರಿಸಿ ಕಡಿಮೆ ಪರಿಮಾಣದಲ್ಲಿ ಖರೀದಿಸಿ ಆಗಿಂದಾಗ್ಗೆ ಮಾರಾಟ ಮಾಡಿ ಈ ವ್ಯವಹಾರದಲ್ಲಿ ನಷ್ಟವಾಗದಂತೆ ಎಚ್ಚರಿಕೆ ವಹಿಸಲಾಗಿದೆ.

೩) ವ್ಯವಸಾಯೋತ್ಪನ್ನಗಳಾದ ಹತ್ತಿ, ಈರುಳ್ಳಿ, ಇತರೆ ಉತ್ಪನ್ನಗಳನ್ನು ಖರೀದಿಸಿ ಹೊರ ದೇಶಗಳಿಗೆ ಸರಬರಾಜು ಮಾಡಲು ಯೋಜಿಸಲಾಗಿದ್ದು, ಈ ವ್ಯವಹಾರದಲ್ಲಿ ಹೆಚ್ಚಿನ ಲಾಭ ಬರುವ ನಿರೀಕ್ಷಣೆ ಇದೆ.

೪) ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಲಿಮಿಟೆಡ್ ಸಂಸ್ಥೆಯಲ್ಲಿ ಹೂಡಿರುವ ರೂ. ೧೨೦ ಲಕ್ಷ ಪ್ರಿಫೆರೆನ್ಷಿಯಲ್ ಷೇರು ಹಣದ ಮೇಲೆ ಬರಬೇಕಾದ ಡಿವಿಡೆಂಡ್ ರೂ. ೧೫೦.೯೭ ಲಕ್ಷಗಳನ್ನು ಲಾಭಕ್ಕೆ ತೆಗೆದುಕೊಂಡಿರುವುದಿಲ್ಲ. ಈ ಹಣ ಬಂದ ಮೇಲೆ, ಈ ಮೊತ್ತದಷ್ಟು ನಷ್ಟ ಕಡಿಮೆಯಾಗುತ್ತದೆ, ಮತ್ತು

೫) ಆಪಲಿತ ವೆಚ್ಚ ಮತ್ತು ವ್ಯಾಪಾರಿ ವೆಚ್ಚಗಳನ್ನೂ ಸಾಧ್ಯವಾದ ಎಲ್ಲಾ ಬಾಬ್ತುಗಳಲ್ಲಿಯೂ ವಿಂಗಡಿಸಲಾಗಿದೆ.

ಮಹಿಳಾ ಅಭಿವೃದ್ಧಿ ನಿಗಮದ ಬಗ್ಗೆ

೭೮೯ ಶ್ರೀ ರಾಜಂಗೌಡ (ಹನೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಮಹಿಳಾ ಅಭಿವೃದ್ಧಿ ನಿಗಮ ಸ್ಥಾಪನೆಯಾಗಿದೆಯೇ ?

(ಆ) ಹಾಗಿದ್ದಲ್ಲಿ ಎಂದಿನಿಂದ ಅಸ್ತಿತ್ವಕ್ಕೆ ಬಂದಿದೆ ಅದರ ಕಾರ್ಯ ವೈಖರಿಗಳೇನು ?

ಶ್ರೀ ಜಿ. ಬಸವಣ್ಣಪ್ಪ. (ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ಇಲ್ಲ. ಪರಿತೀಲನೆಯ ಹಂತದಲ್ಲಿದೆ.

(ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮಹಿಳಾ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಬಗ್ಗೆ.

೫೬೧ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್(ಅಥಣಿ)ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳೇ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(೧) ಸರ್ಕಾರವು ರಾಜ್ಯದಲ್ಲಿ ಮಹಿಳಾ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಪ್ರಸ್ತಾಪವನ್ನು ಯಾವಾಗ ಮಾಡಿತು ?

(೨) ತಡವಾದುದಕ್ಕೆ ಕಾರಣಗಳೇನು ?

(೩) ವಿಷಯವು ಯಾವ ಹಂತದಲ್ಲಿದೆ.

ಶ್ರೀ ಜಿ. ಬಸವಣ್ಣಪ್ಪ. (ಸಮಾಜ ಕಲ್ಯಾಣ ಮಂತ್ರಿಗಳು.)—

(೧) ಮಂಖ್ಯ ಮಂತ್ರಿಯವರು ೧೯೮೫-೮೬ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಪಂಹಿಳಾ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ವಿಷಯವನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದರು.

(೨) ಪ್ರಸ್ತಾವನೆಯನ್ನು ವಿವಿಧ ಇಲಾಖೆಗಳಲ್ಲಿ ಪರಿಶೀಲನೆ ಮಾಡಬೇಕಾಗಿರುವುದರಿಂದ ತಡವಾಗಿದೆ.

(೩) ಸಚಿವ ಸಂಪುಟದ ಮುಂದೆ ಅಂತಿಮ ತೀರ್ಮಾನಕ್ಕಾಗಿ ಶೀಘ್ರವೇ ತರಲಾಗುವುದು.

ಸಮಾಜ ಕಲ್ಯಾಣಕ್ಕೆ ಒದಗಿಸುವ ಹಣ ಮತ್ತು ಮಾಡಿರುವ ವಾಸ್ತವಿಕ ವೆಚ್ಚದ ಬಗ್ಗೆ.

*೫೫೮ (೧) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) (೧) ಸಮಾಜ ಕಲ್ಯಾಣ (೨) ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಇಲಾಖೆ ಮತ್ತು (೩) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳಿಗೆ ೧೯೮೬-೮೭ನೇ ಸಾಲಿನಲ್ಲಿ ಒದಗಿಸಿರುವ ಹಣ ಮತ್ತು ಈ ಇಲಾಖೆಗಳು ಮಾಡಿರುವ ವಾಸ್ತವಿಕ ವೆಚ್ಚ.

(ಆ) ಒದಗಿಸಿರುವ ಹಣವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲಾಗುವುದೇ ?

(ಇ) ಇಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

(ಅ)

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಇಲಾಖೆ	೧೯೮೬-೮೭ನೇ ಸಾಲಿನಲ್ಲಿ ನಿಗದಿ ಪಡಿಸಿರುವ ಹಣ	೧೯೮೬ ಡಿಸೆಂಬರ್ ಅಂತ್ಯದ ವರೆಗೆ ಖರ್ಚು ಮಾಡಿರುವ ಹಣ.
೧	ಸಮಾಜ ಕಲ್ಯಾಣ	೪,೩೯೦.೨೦	೨,೩೬೬.೯೮
೨	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರು	೨,೪೨೮.೪೮	(*) ೫೭೭.೫೫ (*) ಶಿಕ್ಷಣ ಇಲಾಖೆಯಿಂದ ವಿದ್ಯಾವಿಕಾಸ ಕಾರ್ಯಕ್ರಮಕ್ಕಾಗಿ ಮಾಡಿರುವ ಖರ್ಚನ್ನು ಹೊರತು ಪಡಿಸಿ
೩	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ	೨,೫೫೫.೯೫	೧,೪೪೦.೨೭

(ಆ) ಹೌದು.

(ಇ) ಉದ್ಭವಿಸುವುದಿಲ್ಲ.